# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವಿಧಾನ ಸಭೆ ಅಥವಾ ವಿಧಾನ ಪರಿಷತ್ತ ಸದಸ್ಯರು ಅಥವಾ ಕರ್ನಾಟಕದಿಂದ ಚುನಾಯಿತರಾದ ಸಂಸತ್ ಸದಸ್ಯರು ಮೃತರಾದಾಗ ಪರಿಹಾರ ನೀಡುವ ಬಗ್ಗೆ.

**ಉಲ್ಲೇಖ:**1) ಸಚಿವ ಸಂಪುಟ ನಿರ್ಣಯ ದಿನಾಂಕ: 17–3–97

2) ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಉಪ ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತ ಇವರಿಗೆ ಬರೆದ ಪತ್ರ ದಿನಾಂಕ: 26–4–97.

**ಅಧಿಸೂಚನೆ**

**ಪೀಠಿಕೆ:**

ಉಲ್ಲೇಖ (1)ರ ಸಚಿವ ಸಂಪುಟದ ನಿರ್ಣಯದಲ್ಲಿ ಭಟ್ಕಳದ ಮಾಜಿ ವಿಧಾನ ಸಭಾ ಸದಸ್ಯ ಡಾ: ಚಿತ್ತರಂಜನ್ ಅವರು ಮರಣ ಹೊಂದಿದ ಹಿನ್ನಲೆಯಲ್ಲಿ, ಅಸ್ವಾಭಾವಿಕವಾಗಿ ಮರಣಕ್ಕೆ ಈಡಾದ ವಿಧಾನ ಸಭಾ ಸದಸ್ಯರು: ಸಂಸತ್ ಸದಸ್ಯರು (ಕರ್ನಾಟಕದಿಂದ) ಇವರ ಕುಟುಂಬಗಳಿಗೆ 5.00 ಲಕ್ಷ ರೂಪಾಯಿಗಳ ಪರಿಹಾರ ನೀಡಲು ತೀರ್ಮಾನಿಸಿದೆ.

ಉಲ್ಲೇಖ (2)ರಲ್ಲಿ ಮುಖ್ಯಮಂತ್ರಿಯವರು ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಡಾ: ಚಂದ್ರಶೇಖರ ಮಟ್ಟಿ ಇವರ ಪತ್ನಿಗೆ ಸರ್ಕಾರದ ವತಿಯಿಂದ 5.00ಲಕ್ಷ ರೂಪಾಯಿಗಳನ್ನು ಧನ ಸಹಾಯ ಮಂಜೂರು ಮಾಡುವ ಬಗ್ಗೆ ವಿಷಯವನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿದ್ದಾರೆ.

**ಸರ್ಕಾರಿ ಆದೇಶ ಸಂಖ್ಯೆ: ಸಂವ್ಯಶಾಇ 04 ಸಂವ್ಯವಿ 97.**

**ಬೆಂಗಳೂರು, ದಿನಾಂಕ: 29ನೇ ಜುಲೈ , 1997**

ಸಚಿವ ಸಂಪುಟವು ತೆಗೆದುಕೊಂಡ ತೀರ್ಮಾನದ ಹಿನ್ನಲೆಯಲ್ಲಿ ಕರ್ನಾಟಕ ವಿಧಾನ ಸಭಾ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು ಮತ್ತು ಕರ್ನಾಟಕದಿಂದ ಚುನಾಯಿತರಾದ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರು ಅಸ್ವಾಭಾವಿಕವಾಗಿ ಮರಣ ಹೊಂದಿದರೆ ಅವರ ಕುಟುಂಬದವರಿಗೆ 5.00 ಲಕ್ಷ ರೂಪಾಯಿಗಳನ್ನು ಸರ್ಕಾರವು ಪರಿಹಾರ ನೀಡಲು ಮಂಜೂರಾತಿ ನೀಡಿದೆ.

ಈ ಪರಿಹಾರವನ್ನು ಈ ಆದೇಶಕ್ಕೆ ಲಗತ್ತಿಸಲಾಗಿರುವ ಅನುಬಂಧದಲ್ಲಿ ಸೂಚಿಸಿರುವ ನಿಯಮಗಳಿಗೆ ಒಳಪಟ್ಟು ನೀಡತಕ್ಕದ್ದು.

(1) ಈ ಆದೇಶವು ದಿನಾಂಕ: 1.10.94ರ ನಂತರ ಸಂಭವಿಸಿದ ಎಲ್ಲಾ ಅಸ್ವಾಭಾವಿಕ ಮರಣಗಳ ಸಂದರ್ಭದಲ್ಲಿ ಅನ್ವಯವಾಗುತ್ತದೆ. ಪರಿಹಾರವನ್ನು ಮಂಜೂರು ಮಾಡುವ ಅಧಿಕಾರವನ್ನು ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಇವರಿಗೆ ನೀಡಲಾಗಿದೆ.

(2) ಸದರಿ ಬಾಬ್ತು ವೆಚ್ಚವನ್ನು ಲೆಕ್ಕ ಶೀರ್ಷಿಕೆ : "2052– ಸಚಿವಾಲಯ ಸಾಮಾನ್ಯ ಸೇವೆಗಳು–00–090– ಸಚಿವಾಲಯ–0–08 ಅಸ್ವಾಭಾವಿಕವಾಗಿ ಮರಣ ಹೊಂದಿದ್ದು ಶಾಸಕರು ಮತ್ತು ಸಂಸತ್

ಸದಸ್ಯರ ಕುಟುಂಬಕ್ಕೆ ಪರಿಹಾರ (ಯೋಜನೇತರ) ಹೊಸ ಲೆಕ್ಕ ಶೀರ್ಷಿಕೆ" ಅಡಿಯಲ್ಲಿ ಭರಿಸುವುದು

(3) ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 952 ವೆಚ್ಚ–7: 97, ದಿನಾಂಕ: 29–7–97 ಪ್ರಕಾರ ಸಹಮತಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

**ಮ. ರಾ. ಹೆಗಡೆ**

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.